ಎಲ್ಲಿಯೋ ಒಂದು ಕಮರ್ಶಿಯಲ್ ಕಟ್ಟಡದಲ್ಲಿ ತರಕಾರಿ ಮಳಿಗೆ ಇಟ್ಟುಕೊಂಡಿದ್ದಾನಂತೆ ದೀಪಕ್. ಸುಭಾಷ್ ಇವನ ಜೊತೆ ಸಹಾಯಕನಾಗಿ ಇದ್ದಾನೆ. ಅಲ್ಲೇ ಬದಿಯಲ್ಲಿ 'ಗನ್ನಾ ಜ್ಯೂಸ್' ಗಾಡಿ ಹಾಕಿದ್ದಾನಂತೆ. ಅದನ್ನೂ ಸುಭಾಷನೇ ನೋಡಿಕೊಳ್ಳುವುದಂತೆ, ಹಾಗಂತ ಹೇಳಿದ್ದ ದೀಪಕ್. ಫಿಯಟ್ ಕಂಪನಿಯಲ್ಲಿ ವಿ.ಆರ್.ಎಸ್. ಸ್ಕೀಮು ಬಂದಿದ್ದಾಗ ಇವರಿಬ್ಬರೂ ಅದರ ಉಪಯೋಗ ಪಡೆದರು. ದೀಪಕ್ ತಕ್ಕಮಟ್ಟಿಗೆ ಅನುಕೂಲ ಇದ್ದವನು, ಸ್ಕೀಮಿನಲ್ಲಿ ಸಿಕ್ಕ ಹಣದಿಂದ ಈ ಮಳಿಗೆ ಖರೀದಿಸಿ, ಉಳಿದ ಹಣವನ್ನು ಹೂಡಿಕೆ ಹಾಕಿ ವ್ಯವಹಾರ ಕುದುರಿಸಿದ್ದ. ಒಬ್ಬ ಮಗ, ಅದೇನೋ ಓದುತ್ತಿದ್ದಾನೆ ಅಂತ ಹೇಳಿದ ನೆನಪು. ಸುಭಾಷ್ ಆಮೇಲೆ ಇವನ ಜೊತೆ ಸೇರಿಕೊಂಡ. ತನಗೆ ಸಿಕ್ಕಿದ ಹಣವನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟು ನಿಶ್ಚಿಂತೆಯಿಂದಿದ್ದಾನೆ. ಇವನ ಹೆಂಡತಿ, ಅಪ್ಪ ಅಮ್ಮ ಎಲ್ಲ ಏನಾದರು ಎನ್ನುವ ಕುತೂಹಲ ನನಗೆ. ಮಕ್ಕಳ ಬಗ್ಗೆಯೂ ವಿವರ ಗೊತ್ತಾಗಿರಲಿಲ್ಲ. ''ಹೇಗಾಗ್ತವೆ, ಹೆಂಡತಿ ಅಂದ್ರೆ ಬರೇ ಮನೆ ಕೆಲಸಕ್ಕಿರುವವಳು ಅಂತ ತಿಳಿದುಕೊಂಡವ ಇವ. ಒಟ್ಟಿಗೆ ಮನೆಯಲ್ಲಿದ್ದರೆ ಸಾಕೆ? ಮೂಗಿಗೆ ಬೆರಳು ತೂರಿಸಿದರೆ ಮಕ್ಕಳಾಗುತ್ತದೆಯೇ?'' ಅಂತ ದೀಪಕ್ ಅಂದೊಮ್ಮೆ ವ್ಯಂಗ್ಯವಾಡಿದ್ದ. ಆಗಾಗ ತನ್ನ ಮೂಗಿನ ಹೊಳ್ಳೆಗೆ ಕಿರುಬೆರಳು ತೂರಿಸುವ ಅಭ್ಯಾಸವಿತ್ತು ಸುಭಾಷನಿಗೆ. ಒಮ್ಮೆ ನಾನು, ''ಅಸಹ್ಯ ಕಾಣ್ತದೆ, ಬಿಟ್ಟು ಬಿಡು ಅದನ್ನು'' ಅಂದಿದ್ದಕ್ಕೆ, ''ಸರಿ ಸಾಬ್'' ಎಂದಷ್ಟೇ ಉತ್ತರಿಸಿ ಹೊರಟು ಹೋಗಿದ್ದ.

ಲೋಕಲ್ಲು ತನ್ನ ಸ್ಪೀಡಿಗೆ ಬ್ರೇಕು ಹಾಕಿದಾಗ ಇನ್ನೇನು ಬದಲಾಪುರ ಸ್ಟೇಶನ್ನು ಸಮೀಪಿಸುತ್ತಿರುವುದು ವೇದ್ಯವಾಯಿತು. ನಿಧಾನವಾಗಿ ಪ್ಲಾಟ್‌ಫಾರ್ಮನ್ನು ಪ್ರವೇಶಿಸುವಾಗ ನನ್ನ ನೆನಪುಗಳಿಗೂ ಬ್ರೇಕು ಬಿತ್ತು. ನನ್ನನ್ನು ಕರೆದುಕೊಂಡು ಹೋಗಲು ಸ್ಟೇಶನ್ನಿಗೆ ಬರುತ್ತೇನೆ ಎಂದಿದ್ದಾನೆ, ದೀಪಕ್. ಗುರುತು ಹಿಡಿಯುವುದು ಕಷ್ಟವಾಗಲಾರದು.

★★★

ಫಿಯಟ್ ಬಿಟ್ಟು ಎಷ್ಟೋ ವರ್ಷಗಳಾದ ಮೇಲೆ ರಾಮಮೂರ್ತಿಯವರನ್ನು ಕಾಣುತ್ತಿದ್ದೇನೆ. ಮುಂಬಯಿ ಬಿಟ್ಟು ಹೋದ ಮೇಲೆ ಈ ನಡುವೆ ಅವರನ್ನು ಭೇಟಿಯಾಗಿರಲಿಲ್ಲ. ಇಲ್ಲೇ ಇದ್ದಾಗ ಒಂದೆರಡು ಬಾರಿ ಬದಲಾಪುರಕ್ಕೆ ಬಂದಿದ್ದಾಗ ಜೊತೆಯಲ್ಲಿ ಕೂತದ್ದಿತ್ತು. ಆಮೇಲೆ ಆಗಾಗ ಸಂಪರ್ಕದಲ್ಲಿದ್ದೆವು, ಫೋನು ಮೂಲಕ ಅಷ್ಟೇ. ಸುಖ ದುಃಖ, ಸಂಸಾರ ತಾಪತ್ರಯಗಳಿಗಷ್ಟೇ ನಮ್ಮ ಮಾತು ಸೀಮಿತವಾಗಿರುತ್ತಿತ್ತು. ನಾನು ಫಿಯಟ್‌ನಲ್ಲಿ ನೌಕರಿಯಲ್ಲಿದ್ದಾಗ ನಮ್ಮ ಊರ ಜನರಿಗಾಗಿ ನವರಾತ್ರಿ ಸಮಯದಲ್ಲಿ ಆಡಲು ನಾಟಕ ಬರೆಯುತ್ತಿದ್ದೆ, ಅದನ್ನವರು ಖುಷಿಯಿಂದ ತಿಳಿದುಕೊಳ್ಳುತ್ತಿದ್ದರು. ಈಗ ಅದೆಲ್ಲ ಬಿಟ್ಟಿದ್ದೇನೆ, ಹಾಗಂತ ಅವರಿಗೆ ಹೇಳಿದ್ದಕ್ಕೆ, ''ಯಾಕಯ್ಯ, ಬೇಡದ ಆಲೋಚನೆಗಳಿಂದ ಮುಕ್ತನಾಗಲು ನಾಟಕ, ಸಾಹಿತ್ಯ ಎಲ್ಲ ಉಪಕಾರಿ. ಅದನ್ನು ಯಾಕೆ ನಿಲ್ಲಿಸಿದೆ'' ಎಂದು ಬೇಸರ ವ್ಯಕ್ತಪಡಿಸಿದ್ದರು. ಅಪರೂಪಕ್ಕೊಮ್ಮೆ ಸುಭಾಷನ ಬಗ್ಗೆಯೂ ಮಾತು, ಒಟ್ಟಾರೆ ನಮ್ಮ ಹಳೆಯ ನೆನಪುಗಳನ್ನು ಕೆದಕಿ ಅದರ ಸವಿಯನ್ನು ಅನುಭವಿಸುತ್ತಿದ್ದೆವು. ಮೂರ್ತಿ ಸಾಬ್ ನಿನ್ನೆಯೂ ಫೋನಾಯಿಸಿದ್ದರು. ''ನಾಲ್ಕು ದಿನಗಳಿಗಾಗಿ ಮುಂಬಯಿಗೆ ಬಂದಿದ್ದೇನೆ. ಕೆಲವೊಂದು ಜರೂರು ಕೆಲಸಗಳಿವೆ, ಜೊತೆಗೆ ಹಳೆಯ ಮಿತ್ರರನ್ನೂ ಕಾಣಬೇಕೆಂದಿದ್ದೇನೆ'' ಎಂದಾಗ, ''ಹಾಗಾದರೆ ಬನ್ನಿ ಭೇಟಿಯಾಗೋಣ'' ಎಂದು ಆಹ್ವಾನಿಸಿದೆ. ಕೂಡಲೇ ಒಪ್ಪಿಕೊಂಡರು. ಬೆಳಗ್ಗೆ ಹತ್ತರ ಬದಲಾಪುರ ಲೋಕಲ್‌ನಲ್ಲಿ ಬರುತ್ತೇನೆಂದು ತಿಳಿಸಿದ್ದರು. ನನ್ನ ಮಳಿಗೆಗೆ ಬರಲು ಹಾಗೆ ಬನ್ನಿ, ಹೀಗೆ ಮಾಡಿ ಎನ್ನುವ ಬದಲು ಸ್ಟೇಶನ್ನಿಗೇ ಹೋಗುವುದೆಂದು ನಿರ್ಧರಿಸಿ ಬಂದು ಬದಲಾಪುರ ಈಸ್ಟಿನ ಟಿಕೆಟ್ ಕೌಂಟರು ಬಳಿ ನಿಂತು ಲೋಕಲ್ಲು ಬರುವುದಕ್ಕಾಗಿ ಕಾದೆ. ನನ್ನನ್ನು ಬಿಟ್ಟರೆ ಬೇರೆ ಯಾರೂ ಅಲ್ಲಿರಲಿಲ್ಲ. ಪ್ಲಾಟ್‌ಫಾರ್ಮಿನಿಂದ ಹೊರ ಬಂದವರೇ ನನ್ನನ್ನು ಕಂಡು ಕೈ ಬೀಸಿ ನಕ್ಕರು.